# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 348 |
| 2 | ಸದಸ್ಯರ ಹೆಸರು | ಶ್ರೀ ಎಂ.ಎಲ್.ಅನಿಲ್‌ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 21.12.2022 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಮತ್ತು ಚಿಕ್ಕ ಬಳ್ಳಾಪುರ ಜಿಲ್ಲೆಯಲ್ಲಿ ರೈತರ ಜಮೀನುಗಳನ್ನು ಹದ್ದುಬಸ್ತು ಮಾಡಿಸಲು ಕೋರಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | (ಕೆಳಗಿನ ಕೋಷ್ಟಕಗಳು) |

**ಕೋಲಾರ ಜಿಲ್ಲೆಯಲ್ಲಿ ಹದ್ದುಬಸ್ತು ಕೋರಿ ಸ್ವೀಕೃತವಾದ ಅರ್ಜಿಗಳ ಪ್ರಗತಿ ವಿವರ.**

| ತಾಲ್ಲೂಕು | ಪ್ರಾ. ಶಿಲ್ಕು | ಸ್ವೀಕೃತಿ | ಒಟ್ಟು | ವಿಲೇ | ಬಾಕಿ | ಕಂದಾಯ ಶಾಖೆಯಲ್ಲಿ ಬಾಕಿ | ಭೂಮಾಪನ ಶಾಖೆಯಲ್ಲಿ ಬಾಕಿ |
|---|---|---|---|---|---|---|---|
| ಶ್ರೀನಿವಾಸಪುರ | 767 | 591 | 1358 | 828 | 530 | 126 | 404 |
| ಕೋಲಾರ | 2527 | 1214 | 3741 | 2269 | 1472 | 71 | 1401 |
| ಮಾಲೂರು | 1415 | 1207 | 2622 | 1838 | 784 | 10 | 774 |
| ಬಂಗಾರಪೇಟೆ | 881 | 701 | 1582 | 1291 | 291 | 49 | 242 |
| ಮುಳಬಾಗಿಲು | 747 | 884 | 1631 | 1234 | 397 | 41 | 356 |
| ಕೆ.ಜಿ.ಎಫ್ | 975 | 373 | 1348 | 879 | 469 | 56 | 413 |
| **ಒಟ್ಟು** | **7312** | **4970** | **12282** | **8339** | **3943** | **353** | **3590** |

**ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹದ್ದುಬಸ್ತು ಕೋರಿ ಸ್ವೀಕೃತವಾದ ಅರ್ಜಿಗಳ ಪ್ರಗತಿ ವಿವರ.**

| ತಾಲ್ಲೂಕು | ಪ್ರಾ. ಶಿಲ್ಕು | ಸ್ವೀಕೃತಿ | ಒಟ್ಟು | ವಿಲೇ | ಬಾಕಿ | ಕಂದಾಯ ಶಾಖೆಯಲ್ಲಿ ಬಾಕಿ | ಭೂಮಾಪನ ಶಾಖೆಯಲ್ಲಿ ಬಾಕಿ |
|---|---|---|---|---|---|---|---|
| **ಗೌರಿಬಿದನೂರು** | 1122 | 1952 | 3074 | 2776 | 298 | 7 | 291 |
| ಚಿಕ್ಕಬಳ್ಳಾಪುರ | 1511 | 1678 | 3189 | 2899 | 290 | 14 | 276 |
| ಗುಡಿಬಂಡೆ | 295 | 528 | 823 | 708 | 115 | 2 | 113 |
| ಬಾಗೇಪಲ್ಲಿ | 392 | 835 | 1227 | 1070 | 157 | 0 | 157 |
| ಶಿಡ್ಲಘಟ್ಟ | 638 | 1269 | 1907 | 1610 | 297 | 4 | 293 |
| ಚಿಂತಾಮಣಿ | 840 | 1219 | 2059 | 1885 | 174 | 13 | 161 |
| | **4798** | **7481** | **12279** | **10948** | **1331** | **40** | **1291** |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಹದ್ದುಬಸ್ತು ಮಾಡಿಸಲು ಅರ್ಜಿ ಸಲ್ಲಿಸಿದ ನಂತರ ಎಷ್ಟು ದಿನಗಳೊಳಗೆ ಪ್ರಕ್ರಿಯೆ ಪೂರ್ಣಗೊಳಿಸ ಬೇಕಾಗಿದೆ; (ಪೂರ್ಣ ಮಾಹಿತಿ ನೀಡುವುದು) | ಹದ್ದುಬಸ್ತಿಗಾಗಿ ಸಲ್ಲಿಕೆಯಾಗುವ ಅರ್ಜಿಯಲ್ಲಿ ಯಾವುದೇ ಸಮಸ್ಯೆಗಳಿಲ್ಲದೆ ನಿಯಮಾನುಸಾರ ಅಳತೆಗೆ ಯೋಗ್ಯವಿದ್ದಲ್ಲಿ ಅಂತಹ ಪ್ರಕರಣಗಳನ್ನು ಹಂಚಿಕೆ ಯಾದ ದಿನಾಂಕದಿಂದ 45 ದಿನಗಳಲ್ಲಿ ಇತ್ಯರ್ಥಪಡಿಸಲು ಕಾಲಮಿತಿ ನಿಗಧಿಪಡಿಸಿ ರುತ್ತದೆ. |

| | | |
|---|---|---|
| ಇ) | ರೈತರು ಹದ್ದುಬಸ್ತು ಮಾಡಿಸಲು ಅರ್ಜಿ ಸಲ್ಲಿಸಿದ್ದರೂ, ಹದ್ದುಬಸ್ತು ಮಾಡಲು ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | -: ಹದ್ದುಬಸ್ತು ಪ್ರಕರಣಗಳ ವಿಳಂಬಕ್ಕೆ ಕಾರಣಗಳು:-<br>1) ಆಕಾರಬಂದು ಮತ್ತು ಪಹಣಿ ವಿಸ್ತೀರ್ಣದಲ್ಲಿ ವ್ಯತ್ಯಾಸಗಳಿರುವುದು.<br>2) ಪಹಣಿ ಕಾಲಂ 3 ಮತ್ತು 9 ರಲ್ಲಿ ವಿಸ್ತೀರ್ಣದ ವ್ಯತ್ಯಾಸಗಳಿರುವುದು.<br>3) ಪಹಣಿ ತಿದ್ದುಪಡಿ ಮಾಡಲು ಅವಶ್ಯಕವಾದ ಹಿಂದಿನ ಕಂದಾಯ ದಾಖಲೆಗಳು (ಮ್ಯುಟೇಷನ್, ಪಹಣಿ, ಮಂಜೂರಿ ಆದೇಶ-ಇತರ) ಲಭ್ಯವಾಗದಿರುವುದು.<br>4) ಭೂಮಂಜೂರಾತಿ ಪ್ರಕರಣಗಳಲ್ಲಿ ನಮೂನೆ 1 ರಿಂದ 5 ಭರ್ತಿ ಮಾಡುವಲ್ಲಿ ಮಂಜೂರಾತಿ ದಾಖಲೆ ಲಭ್ಯವಾಗದೇ ಇರುವುದು.<br>5) ಭೂಮಂಜೂರಾತಿ ಪ್ರಕರಣಗಳಲ್ಲಿ ಮಂಜೂರಿ ಮತ್ತು ಅನುಭವ ವಿಸ್ತೀರ್ಣಗಳಲ್ಲಿ ವ್ಯತ್ಯಾಸ ಇರುವುದು. ಜಮೀನಿನ ಆಕಾರಬಂದಿನ ವಿಸ್ತೀರ್ಣಕ್ಕಿಂತ ಹೆಚ್ಚಿನ ಕ್ಷೇತ್ರಕ್ಕೆ ಮಂಜೂರಿ ಆದೇಶ ಮಾಡಿರುವುದರಿಂದ ಪಹಣಿ ಸರಿಪಡಿಸುವಲ್ಲಿ ತೊಂದರೆ ಇರುವುದು.<br>6) ಜಮೀನಿನ ಮೂಲ ಭೂದಾಖಲೆಗಳು/ಕಂದಾಯ ದಾಖಲೆಗಳು ಶಿಥಿಲ ವಾಗಿದ್ದು, ಅವುಗಳ ಪುನರ್ ನಿರ್ಮಾಣ ಮಾಡಲು ಹೆಚ್ಚಿನ ಕಾಲಾವಕಾಶ ಬೇಕಾಗುವುದು.<br>7) ಅಳತೆ ವೇಳೆ ಜಮೀನಿನ ಹಕ್ಕು ಮತ್ತು ಗಡಿ ವಿಚಾರದಲ್ಲಿ ತಕರಾರು ಮತ್ತು ನ್ಯಾಯಾಲಯದಲ್ಲಿ ವಿವಾದಗಳಿರುವುದರಿಂದ ಇರುವುದರಿಂದ.<br>8) ಸರ್ಕಾರಿ/ಪರವಾನಗಿ ಭೂಮಾಪಕರಿಗೆ ಪ್ರತಿ ಮಾಹೆ ನಿಗಧಿತ ಗುರಿಯಂತೆ ಕೆಲಸ ನಿರ್ವಹಿಸುತ್ತಿದ್ದು, ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತಿಯಾಗು ತ್ತಿರುವುದರಿಂದ<br>9) COVID-19 ಸಾಂಕ್ರಾಮಿಕ ರೋಗದಿಂದಾಗಿ ರಾಜ್ಯದಲ್ಲಿ ಲಾಕಡೌನ್ ಇದ್ದುದ್ದರಿಂದ ಈ ಸಮಯದಲ್ಲಿ ಅಳತೆ ಕೆಲಸ ಸ್ಥಗಿತಗೊಂಡಿದ್ದರೂ ಅರ್ಜಿಗಳನ್ನು ಸ್ವೀಕರಿಸಲಾಗಿದ್ದು ಹೆಚ್ಚಿನ ಅರ್ಜಿಗಳು ಬಾಕಿ ಉಳಿದಿರುತ್ತವೆ.<br>**-:ಶೀಘ್ರವಾಗಿ ವಿಲೇವಾರಿ ಮಾಡಲು ಕೈಗೊಂಡ ಕ್ರಮಗಳು:-**<br>1) ಭೂಮಾಪನ ಇಲಾಖೆಯಲ್ಲಿ ಮೋಜಿಣಿ ತಂತ್ರಾಂಶದ ಮುಖಾಂತರ ಅರ್ಜಿಗಳ ಸ್ವೀಕೃತಿ, ಅರ್ಜಿಗಳ ಹಂಚಿಕೆ, ಅಳತೆ ಮಾಡಿ ಅಪ್‌ಲೋಡ್ ಮಾಡುವುದು, ಕಡತಗಳ ಪರಿಶೀಲನೆ ಮೊದಲಾದ ಎಲ್ಲಾ ಅಳತೆ ಪ್ರಕ್ರಿಯೆಗಳನ್ನು ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿನಂತೆ) ಆನ್‌ಲೈನ್ ಮೂಲಕ ನಿರ್ವಹಿಸಲಾಗುತ್ತಿದೆ.<br>2) ನಿಯಮಿತವಾಗಿ ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಂದಾಯ ಅದಾಲತ್‌ಗಳನ್ನು ನಡೆಸಲಾಗುತ್ತಿದೆ.<br>3) ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಲು ಅಗತ್ಯ ಸೂಚನೆ ಮತ್ತು ಮಾರ್ಗಸೂಚಿಗಳನ್ನು ನೀಡಲಾಗಿದೆ.<br>4) ಕಾಲಕಾಲಕ್ಕೆ ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.<br>5) ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>6) 2072 ಪರವಾನಗಿ ಭೂಮಾಪಕರ ಆಯ್ಕೆ ಕುರಿತು ಅರ್ಜಿಗಳನ್ನು ಆಹ್ವಾನಿಸಿ, 508 ಪರವಾನಗಿ ಭೂಮಾಪಕರು ತರಬೇತಿ ಪಡೆಯುತ್ತಿದ್ದು, ತರಬೇತಿ ನಂತರ ಉತ್ತೀರ್ಣರಾದವರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ಕಾರ್ಯ ನಿಯೋಜಿಸಲಾಗುತ್ತಿದ.<br>7) ಅಗತ್ಯತೆಗನುಗುಣವಾಗಿ ಹೊಸದಾಗಿ 3000 ಪರವಾನಗಿ ಭೂಮಾಪಕರನ್ನು ಆಯ್ಕೆ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಭೂಕಂದಾಯ ನಿಯಮಗಳಿಗೆ ಅಗತ್ಯ ತಿದ್ದುಪಡಿ ತಂದು ಸರ್ಕಾರಿ ಭೂಮಾಪಕರು ಹಾಗೂ ಪರವಾನಗಿ ಭೂಮಾಪಕರುಗಳಿಗೆ ಅಳತೆ ಅರ್ಜಿಗಳನ್ನು ಸಮರ್ಪಕ ರೀತಿಯಲ್ಲಿ ಹಂಚಿಕೆ ಮಾಡಲಾಗುತ್ತಿದ್ದು, ಇದರಿಂದ ಭೂಮಾಪಕರ ಕಾರ್ಯ ಒತ್ತಡ ಕಡಿಮೆಯಾಗಿ, ಅಳತೆ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸಾಧ್ಯವಾಗುತ್ತಿದೆ. |

**ಸಂಖ್ಯೆ: ಕಂಇ 244 ಎಸ್‌ಎಸ್‌ಸಿ 2022**

(ಆರ್.ಅಶೋಕ)
ಕಂದಾಯ ಸಚಿವರು